## ಸ್ವಾತಂತ್ರ್ಯ ಕೃಷಿ ಮಹೋತ್ಸವ :

ತ್ರಿವರ್ಣ ಧ್ವಜ ರಾರಾಜಿಸುದ್ದನ್ನು ಕಂಡು ನಮ್ಮೆಲ್ಲರಿಗೂ ನಮ್ಮ ಸ್ವಾತಂತ್ರ್ಯ ಸೇನಾನಿಗಳ ಶ್ರಮ ನೆನಪಾಯಿತು. ಈ ಒಂದು ಮಂಗಳಕರ ದಿನದಂದು ಭಾರತ ದೇಶ ಬ್ರಿಟೀಷ್ ಸಾಮ್ರಾಜ್ಯದ ಹಿಡಿತದಿಂದ ಸ್ವಾತಂತ್ರ್ಯದ ಕಡೆಗೆ ಮುನ್ನುಗ್ಗಿತು, ಆದರೆ ಬಡತನ, ಹಸಿವು, ಅಪೌಷ್ಠಿಕತೆ ತಾಂಡವವಾಡುತಿತ್ತು. ಈ ದಿನದಂದು ಮರಳಕುಂಟೆ ಗ್ರಾಮದ ಉದ್ದಗಲಕ್ಕೂ ತ್ರಿವರ್ಣ ಧ್ವಜವನ್ನು ಹಾರಿಸಿ ಸ್ವಾತಂತ್ರ್ಯೋತ್ಸವವನ್ನು ಬಹಳ ವಿಜೃಂಭಣೆಯಿಂದ ಆಚರಿಸಲಾಯಿತು.








## ಗ್ರಾಮ ಗ್ರಾಮಸ್ಥರ ಪರಿಚಯ :

ಮೊದಲನೆಯವಾರ ಮರಳಕುಂಟೆ ಗ್ರಾಮ ಕೃಷಿ ಕಾರ್ಯಾನುಭವ ರೈತರ ಮನೆ ಅವರ ಹೊಲ ತೋಟಕ್ಕೆ ಭೇಟಿ ನೀಡಿ ಅವರೊಂದಿಗೆ ಪರಿಚಯವಾಯಿತು. ಅವರ ಹಾವಭಾವಗಳನ್ನು ಕಾರ್ಯಗಳನ್ನು ಸೂಕ್ಷ್ಮವಾಗಿ ಗಮನಿಸಿ ಸೂಚನೆಗಳನ್ನು ಬರೆದುಕೊಂಡು ಅವರ ತೊಂದರೆಗಳು ಕುಂದುಕೊರತೆಗಳ ಪಟ್ಟಿ ತಯಾರಿಸಿದೆವು.








## ಸಾಂಪ್ರದಾಯಕತೆಯಿಂದ ಆಧುನಿಕತೆಯ ಕಡೆಗೆ ಮರಳಕುಂಟೆಯ ನಡಿಗೆ :

ಮರಳಕುಂಟೆಯ ಸಾಂಪ್ರದಾಯಿಕ ಬೆಳೆಗಳು ;

ರಾಗಿ, ಜೋಳ, ತೊಗರಿ, ಕಡಲೆ


ಮರಳಕುಂಟೆಯ ಆಧುನಿಕ ಬೆಳೆಗಳು :

ಅಡಿಕೆ, ವೀಳ್ಯದೆಲೆ, ಬಾಳೆ, ಚೆಂಡು, ಸೇವಂತಿಗೆ, ಹೂಕೋಸು, ಎಲೆಕೋಸು












## ಹಾಲಿನ ಹೊಳೆ ಮರಳಕುಂಟೆಗೆ ಕಳೆ:

ಮರಳಕುಂಟೆ ಹೈನುಗಾರಿಕೆಗೆ ಹೆಸರುವಾಸಿ. ಬಹುತೇಕ ಗ್ರಾಮಸ್ಥರ ಆದಾಯದ ಮೂಲ ಮರಳಕುಂಟೆಯಲ್ಲಿ ಸ್ಥಾಪಿಸಲಾಗಿರುವಂತಹ ಹಾಲು ಸಂಸ್ಕರಣಾ ಘಟಕದಲ್ಲಿ ಮುಂಜಾನೆ ಹಾಗು ಸಾಯಂಕಾಲ ಹಾಲು ತಂದು ಶೇಖರಣೆ ಮಾಡುತ್ತಾರೆ.

ಸುಮಾರು ೬೦೦ ಲೀ. ರಷ್ಟು ದಿನ ಒಂದಕ್ಕೆ ಘಟಕದಲ್ಲಿ ಶೇಖರಣೆ ಮಾಡಲಾಗುತ್ತದೆ.







## ಮೊದಲ ಗ್ರಾಮಸಭೆ:

ವೇಳಾಪಟ್ಟಿಯಲ್ಲಿರುವ ಸೂಚನೆಯಂತೆ ಹಾಗೂ ಡಾ// ಸಿ.ಎಮ್. ಸವಿತಾರವರ ನಿರ್ದೇಶನದಂತೆ ೨೪ ಆಗಸ್ಟ್ ೨೦೨೨ ರಂದು ಮರಳಕುಂಟೆಯ ರೈತರಿಗೆ ಅಧಿಕೃತವಾಗಿ ನಮ್ಮ ಪರಿಚಯವಾಯಿತು. ಈ ಸಭೆಯಲ್ಲಿ ಡಾ// ಸಿ.ಎಮ್. ಸವಿತಾ, ಕೃಷಿ ಅಧಿಕಾರಿಗಳಾದ ಪ್ರಭು, ಗ್ರಾಮಪಂಚಾಯಿತಿಯ ಅಧ್ಯಕ್ಷರಾದ ಶ್ರೀಮತಿ ಧನಲಕ್ಷ್ಮಿ ಮತ್ತು ಹತ್ತು ಹಲವಾರು ಗಣ್ಯರು ಹಾಗೂ ಮರಳಕುಂಟೆಯ ಗ್ರಾಮಸ್ಥರು ಉಪಸ್ಥಿತರಿದ್ದರು.







.

## ಮರಳಕುಂಟೆಯ ನಡೆ ತಾಂತ್ರಿಕತೆಯ ಕಡೆ:

ಸೆಪ್ಟೆಂಬರ್ ೩, ೨೦೨೨ ರಂದು ನಡೆದಿದ್ದಂತಹ ಉನ್ನತ ಕೃಷಿ ತಾಂತ್ರಿಕ ಉಪಕರಣಗಳು ಹಾಗೂ ಅಂತರ್ಜಲ ಮರುಪೂರಣೆ ಬಗೆಗಿನ ಒಂದು ಕಾರ್ಯಕ್ರಮ.








## ನ್ಯಾನೋ ಯೂರಯ ಕ್ರಾಂತಿ :

ಮರಳಕುಂಟೆಯಲ್ಲಿ ನ್ಯಾನೋ ಯೂರಯ ಹೊಂಗಿರಣದಂತೆ ಪ್ರಕಾಶಮಾನವಾಗಿ ನಮ್ಮೆಲ್ಲ ರೈತ ಭಾಂಧವರಿಗೆ ಹೊಲ ಗದ್ದೆ ತೋಟಗಳಲ್ಲಿ ಬೆಳೆಯ ಪೌಷ್ಟಿಕತೆ ಅಗತ್ಯವನ್ನು ಪೂರೈಸುತ್ತದೆ.

IFFCO ಸಂಸ್ಥೆಯ ಅಧಿಕಾರಿ ಕಡೆಯಿಂದ ನ್ಯಾನೋ ಯೂರಿಯ ಬಳಕೆ ಪ್ರದರ್ಶನ ಹಾಗೂ ರ್‍ಯಾಲಿ ಆಯೋಜಿಸಲಾಗಿತ್ತು.






## ದೇಶದ ಭವಿಷ್ಯದ ಪೌಷ್ಟಿಕಾಂಶದ ಭದ್ರತೆ ಸಿರಿಧಾನ್ಯಗಳ ಜೊತೆ :

ರಾಗಿಮಾಲ್ಟ್ ತಯಾರಿಕೆ ಹಾಗೂ ವಿತರಿಕೆಯ ಕಾರ್ಯಕ್ರಮವನ್ನು ಮರಳಕುಂಟೆ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಲಾಗಿತ್ತು ಸಿರಿಧಾನ್ಯಗಳ ಹಾಗೂ ಸಿರಿಧಾನ್ಯಗಳ ಮೌಲ್ಯವರ್ಧನೆಯ ಉಪಯೋಗಗಳನ್ನು ಪರಿಚಯಿಸಲಾಗಿತ್ತು.







## ಭೂಮಿ ತಾಯಿಯ ಆರೋಗ್ಯ ತಪಾಸಣೆ :

ಮಣ್ಣಿನ ಪರೀಕ್ಷೆ ಬಗೆಗಿನ ಕಾರ್ಯಕ್ರಮ ಹಾಗೂ ಅದರ ಉಪಯೋಗಗಳನ್ನು ಮಾದರಿ ಸಂಗ್ರಹಣೆ ಈ ಮೇಲಿನ ವಿಷಯಗಳ ಬಗ್ಗೆ ಕಾರ್ಯಕ್ರಮ.





## ರೈತರ ಭದ್ರತೆ ನಮ್ಮೆಲ್ಲರ ಭದ್ದತೆ :

ಹಲವಾರು ರಾಸಾಯನಿಕ ಪದಾರ್ಥಗಳನ್ನು ಆಧುನಿಕ ಕೃಷಿಯಲ್ಲಿ ಅನಿವಾರ್ಯವಾಗಿ ಉಪಯೋಗಿಸುತ್ತಾರೆ ನಮ್ಮ ರೈತ ಭಾಂದವರು ಇದು ಅವರ ಮೇಲೆ ಅಪಾಯಕಾರಿಯಾಗಿ ಪರಿಣಾಮ ಬೀರುತ್ತಿದೆ ಈ ಎಲ್ಲಾ ರಾಸಾಯನಿಕಗಳನ್ನು ಸೂಕ್ಷ್ಮವಾಗಿ ಉಪಯೋಗಿಸಬೇಕು ಇದರ ಬಗ್ಗೆ ಅರಿವು ಮೂಡಿಸಲು ಕಾರ್ಯಕ್ರಮವನ್ನು ಆಯೋಜಸಲಾಗಿತ್ತು.





## ಸಂಜೆಯ ಸಭೆಯ ಸಮಗ್ರ ಸಮಾಚಾರ :

ಮರಳಕುಂಟೆಯಲ್ಲಿ ಹಲವಾರು ವಿಷಯಗಳ ಮೇಲೆ ಕಾರ್ಯಕ್ರಮವನ್ನು , ಗುಂಪುಚರ್ಚೆಗಳನ್ನು ಆಯೋಜಿಸಿದ್ದೆವು ಹಾಗೂ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿದೆವು.









## ಪಶು ಚಿಕಿತ್ಸಾ ಶಿಬಿರ :

ಸೆಪ್ಟೆಂಬರ್ ೨೭ ರಂದು ಆಯೋಜಿಸಲಾಗಿದ್ದಂತಹ ಉಚಿತ ಪಶುಚಿಕಿತ್ಸಾ ಶಿಬಿರಕ್ಕೆ ಡಾ॥ ಶಿವಲಿಂಗಯ್ಯ ಹಾಗೂ ಡಾ॥ ಸಿ.ಎಮ್ ಸವಿತಾ ಮರಳಕುಂಟೆಯ ಡೈರಿಯ ಅಧ್ಯಕ್ಷರಾದ ಗಂಗರಾಜು, ಕಾರ್ಯದರ್ಶಿಯಾದ ಶಿವಕುಮಾರ್, ಬಮೂಲ್ ಕೃಷಿ ಅಧಿಕಾರಿಯಾದಂತಹ ಪ್ರಸನ್ನ ಕುಮಾರ್, ಡಾ॥ ಆನಂದ್ ಮನೆಗಾರ, ಕೆ.ಎಮ್.ಎಫ್ ಅಧಿಕಾರಿ ಗೋಪಾಲಗೌಡರು, ಡಾ॥ ಆದರ್ಶ ಉಪಸ್ಥಿತರಿದ್ದರು.

ಶಿಬಿರಕ್ಕೆ ೯೦ ರೈತರು ೨೭೦ ಹಸುಗಳು, ಎಮ್ಮೆ, ಕುರಿ ಪಾಲ್ಗೊಂಡಿದ್ದವು.








ಪ್ರಜಾವಾಣಿ

**ಕ್ರಮಬದ್ಧ ಪಶುಪಾಲನೆ ರೈತರಿಗೆ ಲಾಭದಾಯಕ**

ದೊಡ್ಡಬಳ್ಳಾಪುರ ತಾಲ್ಲೂಕಿನ ಮರಳುಕುಂಟೆ ಗ್ರಾಮದಲ್ಲಿ ಜಿಕೆವಿಕೆಯಿಂದ ನಡೆದ ಗ್ರಾಮೀಣ ಕೃಷಿ ಕಾರ್ಯಾನುಭವದ ಅಂಗವಾಗಿ ಬರಡು ರಾಸುಗಳ ತಪಾಸಣೆ ಹಾಗೂ ಪಶು ಆರೋಗ್ಯ ಚಿಕಿತ್ಸಾ ಶಿಬಿರ ನಡೆಯಿತು

ದೊಡ್ಡಬಳ್ಳಾಪುರ: ಸಮತೋಲನ ಆಹಾರ ಹಾಗೂ ಕ್ರಮಬದ್ಧ ವಿಧಾನದಲ್ಲಿ ಪಶುಪಾಲನೆ ಮಾಡಿದರೆ ಮಾತ್ರ ಹೈನುಗಾರಿಕೆಯಲ್ಲಿ ಲಾಭಗಳಿಕೆ ಸಾಧ್ಯವಾಗಲಿದೆ ಎಂದು ಬೆಂಗಳೂರು ಗಾಂಧಿ ಕೃಷಿ ವಿಶ್ವ ವಿದ್ಯಾಲಯದ ಸಹ ಪ್ರಾಧ್ಯಾಪಕ ಡಾ.ಆನಂದ್ ಮಾನೇಗಾರ್ ಹೇಳಿದರು.

ಅವರು ತಾಲ್ಲೂಕಿಗೆ ಸಮೀಪದ ಮರಳುಕುಂಟೆ ಗ್ರಾಮದಲ್ಲಿ ಬೆಂಗಳೂರು ಗಾಂಧಿ ಕೃಷಿ ವಿಶ್ವ ವಿದ್ಯಾಲಯದ ಅಂತಿಮ ವರ್ಷದ ಕೃಷಿ ವಿದ್ಯಾರ್ಥಿಗಳ ಗ್ರಾಮೀಣ ಕೃಷಿ ಕಾರ್ಯಾನುಭವದ ಅಂಗವಾಗಿ ಆಯೋಜಿಸಿದ್ದ ಬರಡು ರಾಸುಗಳ ತಪಾಸಣೆ ಹಾಗೂ ಪಶು ಆರೋಗ್ಯ ಚಿಕಿತ್ಸಾ ಶಿಬಿರದಲ್ಲಿ ಮಾತನಾಡಿದರು.

ರಾಸುಗಳಿಗೆ ನೀಡುವ ಆಹಾರ ಕ್ರಮ ಸರಿ ಇಲ್ಲದೆ ಇದ್ದರೂ ಅನಾರೋಗ್ಯಕ್ಕೆ ತುತಾಗುವ ಸಾದತೆ ಹೆಚಿದೆ. ವೆದರ

ಮಾರ್ಗದರ್ಶದಿಂದ ಕಾಯಿಲೆಗಳನ್ನು ತಡೆಯಬಹುದು. ರೈತರಿಗೆ ಒಣ ಮೇವನ್ನು ರಸಭರಿತ ಹಾಗೂ ಪೌಷ್ಟಿಕಾಂಶಯುಕ್ತವಾಗಿ ಮಾರ್ಪಡಿಸುವ ವಿಧಾನವನ್ನು ಪ್ರಾತ್ಯಕ್ಷಿಕೆ ಮೂಲಕ ಮನವರಿಕೆ ಮಾಡಿಕೊಟ್ಟರು.

ಹಾಲಿನ ಮಹತ್ವ, ಹಾಲು ಉತ್ಪಾದನೆ ಹೆಚ್ಚಿಸುವ ಕುರಿತು ಬಮೂಲ್ ಉಪ ವ್ಯವಸ್ಥಾಪಕ ಗೋಪಾಲಗೌಡ ಮಾಹಿತಿ ನೀಡಿದರು.

ಶಿಬಿರದಲ್ಲಿ ಮೇಲ್ವಿಚಾರಕಿ ಡಾ.ಸಿ.ಎಂ.ಸವಿತಾ, ಮರಳುಕುಂಟೆ ಎಂಪಿಸಿಎಸ್ ಅಧ್ಯಕ್ಷ ಗಂಗರಾಜು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಿವಕುಮಾರ್, ಬಮೂಲ್ ಕೃಷಿ ಅಧಿಕಾರಿ ಪ್ರಸನ್ನಕುಮಾರ್, ಸಹಾಯಕ ವ್ಯವಸ್ಥಾಪಕ ಡಾ.ಆದರ್ಶ, ಡಾ. ಹೊರಕೇರಪ್ಪ, ಡಾ.ಕಾವ್ಯ ಹಾಗೂ ನೂರಕ್ಕೂ ಹೆಚ್ಚಿನ ಶಿಬಿರಾರ್ಥಿಗಳು ಇದರು.

WE ARE BACK WITH NEW BREATH TAKING ACTS